ಸಿಸಿನಂ.160/2023

ಪಿಡಬ್ಲ್ಯೂ 4

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.</u>

ಸಿಸಿ ನಂ.160/2023

ಪಿಡಬ್ಲೂ : 4

| | | |
|---|---|---|
| ಹೆಸರು | : | ಕುಮಾರಿ ರೇಖಾ |
| ತಂದೆಯ ಹೆಸರು | : | ವಿರುಪಣ್ಣ ಬಾಗೋಜಿ |
| ವಯಸ್ಸು | : | 23 ವರ್ಷ |
| ಉದ್ಯೋಗ | : | ಪೋಸ್ಟಮೆನ್ , ನಾಡುಮಾಸ್ಕೇರಿ |
| ವಾಸ್ತವ್ಯ | : | ನಾಡುಮಾಸ್ಕೇರಿ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 13-02-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ಪಿರ್ಯಾದುದಾರರ ಪರವಾಗಿ : ಶ್ರೀ ಪಿ ಜಿ ಹೆಚ್ ವಕೀಲರಿಂದ :</u>**

ನಾನು ನಾಡುಮಾಸ್ಕೇರಿ ಪೋಸ್ಟ ಆಫೀಸ್ ನಲ್ಲಿಎರಡು ವರ್ಷಗಳಿಂದ ಪೋಸ್ಟಮೆನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಇದು ನನ್ನ ಪಸ್ಟ ಅಪೌಂಟಮೆಂಟ್ . ನಾನು ದಿಃ 10-11-2023 ರಂದು ಪೋಸ್ಟಮೆನ್ ಆಗಿ ನೇಮಕಗೊಂಡಿರುತ್ತೇನೆ. ನನಗಿಂತ ಪೂರ್ವದಲದ್ಲಿ ನಾಡುಮಾಸ್ಕೇರಿಯಲ್ಲಿ ಯಾರು ಪೋಸ್ಟಮೆನ್ ಆಗಿದ್ದರು ಗೊತ್ತಿಲ್ಲ .

2. ಯಾವುದೇ ಸಾರ್ವಜನಿಕರಿಗೆ ಅಂಚೆ , ನೋಂದಾಯಿತ ಅಂಚೆ , ನೋಂದಾಯಿತ ಪಾರ್ಸಲ್ ಹಾಗೂ ವಿವಿಧ ರೀತಿಯ ಪೋಸ್ಟ ಆಫೀಸ್ ನ ಸೇವೆಗಳನ್ನು ನಾವು ಯಾವ ವಿಳಾಸಕ್ಕೆ ಬಂದಿದೆಯೋ ಆ ವಿಳಾಸಕ್ಕೆ ಜಾರಿ ಮಾಡುತ್ತೇವೆ . ನಮ್ಮ ಕಚೇರಿಯಲ್ಲಿ ಒಂದುವರೆ ವರ್ಷದ ದಾಖಲಾತಿಗಳು ಮಾತ್ರ ಇರುತ್ತವೆ . ಅದಕ್ಕಿಂತ ಮೊದಲಿನ ದಾಖಲಾತಿಗಳು ಕುಮಟಾ ಹೆಡ್ ಪೋಸ್ಟಗೆ ಕಳಿಸುತ್ತೇವೆ . ಯಾವುದೇ ನೋಂದಾಯಿತ ಅಂಚೆ ಬಂದಲ್ಲಿ ಆ ವಿಳಾಸಗಾರರಿಗೆ ಇಂತಹ ಅಂಚೆ ಬಂದಿದೆ , ಅದನ್ನು ಬಂದು ಸ್ವೀಕರಿಸಿ

ಎಂದು ಅವರಿಗೆ ತಿಳಿಸುತ್ತೇವೆ . ಮಾಹಿತಿಯನ್ನು ನೀಡಿ 7 ದಿನಗಳವರೆಗೆ ಕಾಯುತ್ತೇವೆ . ಮೊದಲು ಎರಡು ದಿನ ಇಂಟಿಮೇಶನ್ ಕೊಡುತ್ತೇವೆ . 7 ದಿನಗಳ ಅವಧಿಯಲ್ಲಿ ಅವರು ಬಂದು ತೆಗೆದುಕೊಂಡು ಹೋಗದಿದ್ದರೆ ನಾಟ್ ಕ್ಲೇಮ್ಡು ಎಂಬ ಹಿಂಬರಹದೊಂದಿಗೆ ಯಾರು ಕಳಿಸಿರುತ್ತಾರೆ ಅವರಿಗೆ ವಾಪಸ್ಸು ಮಾಡುತ್ತೇವೆ .

3. ನಿಪಿ-5 ನಮ್ಮ ಅಂಚೆ ಕಚೇರಿಯಿಂದ ನೀಡಲಾದ ದಾಖಲಾತಿ . ನಿಪಿ-5 ಕುಮಟಾ ಕಚೇರಿ ಸಬ್ ಆಫೀಸ್ ನಲ್ಲಿ ನೋಂದಾಯಿತವಾದ ಬಗ್ಗೆ ನೀಡಿದ ಪಾವತಿ . ಸದರಿ ಪಾವತಿ ಯಾವ ವಿಳಾಸದ ಅಂಚೆದಾರರಿಗೆ ಹೋಗಿದೆ ನಮೂದು ಇದೆ . ಸದರಿ ಅಂಚೆ ನಾಗರಾಜ ನಾರಾಯಣ ಗಂಗಾವಳಿ ಇವರ ಹೆಸರಿಗೆ ದಾಖಲಾಗಿತ್ತು. ಸದರಿ ನೋಂದಾಯಿತ ಅಂಚೆ ದಿಃ 21-06-2021 ರಂದು 11-00 ಗಂಟೆಗೆ ನೋಂದ ಆಗಿದೆ . ಸದರಿ ನೋಂದಾಯಿತ ಅಂಚೆಯನ್ನು ಪಿ ಜಿ ಹೆಗಡೆ ಎಂಬುವವರು ನೋಂದಾಯಿತ ಮಾಡಿರುತ್ತಾರೆ . ನಿಪಿ-5 ರಂತೆ ಬುಕಿಂಗ್ ಆದ ಕವರ ನಿಪಿ -6 ಆಗಿರುತ್ತದೆ . ನಿಪಿ-6 ನಾಗರಾಜ ನಾರಾಯಣ ನಾಯ್ಕ ಊರು ಗಂಗಾವಳಿ ಇವರ ಹೆಸರಿಗೆ ಕಳುಹಿಸಲಾಗಿತ್ತು . ನಿಪಿ-6 ರಂತೆ ನೋಂದಾಯಿತ ಅಂಚೆ ದಿಃ 22-06-2021, ದಿಃ 23-06-2021 6 ದಿವಸ ಕಾಯ್ದು 7 ನೇ ದಿನಕ್ಕೆ ದಿಃ 26-06-2021 ರಂದು ಅಂಚೆ ವಾಪಸ್ಸು ಮಾಡಿರುತ್ತಾರೆ . ವಾಪಸ್ಸು ಮಾಡಬೇಕಾದರೆ ಅಂಚೆಯ ಮೇಲೆ ನಾಟ್ ಕ್ಲೇಮ್ಡು ಎಂದು ಬರೆದಿದ್ದಾರೆ . ನಾಟ್ ಕ್ಲೇಮ್ಡು ಎಂದರೆ ಈ ವಿಳಾಸದಾರರು ಅಂಚೆ ತೆಗೆದುಕೊಂಡಿಲ್ಲ ಎಂದು ಅರ್ಥ . ನಮ್ಮ ಅಂಚೆ ನಿಯಮಗಳ ಪ್ರಕಾರ ಅಂಚೆ ಯಾರ ವಿಳಾಸಕ್ಕೆ ಬಂದಿರುತ್ತದೆಯೋ ಅವರಿಗೆ ಖುದ್ದಾಗಿ ಜಾರಿ ಮಾಡಬೇಕು . ಅಂತಹ ವಿಳಾಸದಾರರು ಅಧಿಕಾರವನ್ನು ಕೊಟ್ಟರೆ ಮಾತ್ರ ಅಂತಹ ಅಧಿಕಾರ ಹೊಂದಿದವರಿಗೆ ಜಾರಿ ಮಾಡಬೇಕು . ನ್ಯಾಯಾಲಯದಿಂದ ಸಮನ್ಸ ಬಂದಾಗ ಯಾವ ಯಾವ ದಾಖಲಾತಿಗಳನ್ನು ತೆಗೆದುಕೊಂಡ ಬರಬೇಕು ಸಮನ್ಸನಲ್ಲಿ ನಮೂದಿಸಲಾಗಿತ್ತು ಎಂದರೆ ಸರಿ . ನಮ್ಮಲ್ಲಿ ಒಂದುವರೆ ವರ್ಷದವರಿಗಿನ ದಾಖಲಾತಿಗಳು ಮಾತ್ರ ಇರುತ್ತವೆ , ಕಾರಣ ಸಮನ್ಸನಲ್ಲಿ ಕೇಳಿದ

ದಾಖಲಾತಿಗಳನ್ನು ತಂದಿಲ್ಲ. ನಾವು ಹೆಡ್ ಪೋಸ್ಟ ಕುಮಟಾಕ್ಕೆ ಬಂದು ಈ ದಾಖಲಾತಿಗಳನ್ನು ಕೊಡಿ ಎಂದು ಕೇಳಿರುತ್ತೇನೆ ಆದರೆ ಅವರು ಕೊಟ್ಟಿಲ್ಲ. ಕೋರ್ಟ ಆವರಣದಲ್ಲಿ ನನಗೆ ಆರೋಪಿ ಪರ ವಕೀಲರು ಈ ರೀತಿ ಹೇಳಬೇಕು ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ . ಕೋರ್ಟನವರು ಅವಕಾಶ ಕೊಟ್ಟಲ್ಲಿ ಕುಮಟಾ ಪ್ರಧಾನ ಅಂಚೆ ಕಚೇರಿಯಿಂದ ಸಮನ್ಸನಲ್ಲಿ ನಮೂದಿಸಿದ ದಾಖಲಾತಿಗಳನ್ನು ತೆಗೆದುಕೊಂಡು ಬಂದು ಸಾಕ್ಷಿ ಹೇಳಲು ತೊಂದರೆ ಇಲ್ಲ .

(ಈ ಹಂತದಲ್ಲಿ ಫಿರ್ಯಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಗಿದೆ . )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.